ನಕ್ಷತ್ರಪಟ

# ಪಿಂಕಿಯ ಪತ್ತೆದಾರಿ



ಜಿ.ವಿ. ಅರುಣ

ಕಲೆ: ಕಲೆ: ಸಂತೋಷ್ ಸಸಿಹಿತ್ಲು

ಶುಕ್ರವಾರ ಶಾಲೆಗೆ ಬಂದಾಗ ಪಿಂಕಿಯ ಆಪ್ತಸ್ನೇಹಿತೆ ಇಂಚರಳ ಕಣ್ಣುಗಳು ಕೆಂಪಾಗಿದ್ದವು. ಪಿಂಕಿ ಸೂಕ್ಷ್ಮವಾಗಿ ಅಳುತ್ತಿದ್ದ ಅವಳನ್ನು ಗಮನಿಸಿದಳು. ಪಕ್ಕಕ್ಕೆ ಅವಳನ್ನು ಕರೆದು 'ಏನಾಯ್ತು ಇಂಚರ...?' ಎಂದು ಕೇಳಿದಳು. ಇಂಚರ ಬಿಕ್ಕಿಬಿಕ್ಕಿ ಅಳುವುದಕ್ಕೆ ಪ್ರಾರಂಭಿಸಿದಳು. ಪಿಂಕಿ ಅವಳನ್ನು ತಬ್ಬಿ ಹಿಡಿದು, 'ಸಮಾಧಾನ ಮಾಡ್ಕೊಳ್ಳೆ. ಏನಾಯಿತು?' ಎಂದು ಕೇಳಿದಳು. 'ಪಾಪ ಅವರ ಮನೆಯಲ್ಲಿ ಯಾರಿಗಾದರೂ ಹುಷಾರ್ ಇಲ್ವಾ? ಅವಳ ಪುಸ್ತಕಗಳು ಕಳೆದು ಹೋದುವ? ಅವಳು ಏನಾದರು ಈ ಶಾಲೆಯನ್ನು ಬಿಟ್ಟು ಬೇರೆ ಶಾಲೆಗೆ ಸೇರಿಕೊಳ್ಳುತ್ತಿದ್ದಾಳೆಯೇ?' ಹೀಗೆ ಪಿಂಕಿಗೆ ಅನೇಕ ಪ್ರಶ್ನೆಗಳು ಮನಸ್ಸಿಗೆ ಬಂದವು. ಇಂಚರ ಸಮಾಧಾನ ಮಾಡಿಕೊಂಡು, 'ನನ್ನ ಪ್ರೀತಿಯ ಟೈಗರ್ ತಪ್ಪಿಸಿಕೊಂಡು ಬಿಟ್ಟಿದೆ' ಎಂದು ಮತ್ತೆ ಮೂಗನ್ನು ಸೊರೆದುಕೊಂಡು ಅತ್ತಳು.

ಇಂಚರಳ ಮನೆಗೆ ಒಂದು ವಾರದ ಹಿಂದೆ ಅವಳ ತಂದೆ ಒಂದು ಬೆಕ್ಕಿನ ಮರಿಯನ್ನು ತಂದುಕೊಟ್ಟಿದ್ದರು. ಅವಳು ತನ್ನ ಹುಟ್ಟಿದ ಹಬ್ಬಕ್ಕೆ 'ಬೆಕ್ಕಿನ ಮರಿ ಬೇಕು' ಎಂದು ಕೇಳಿದ್ದಳು. ಹಾಗಾಗಿ ಗಾಢ ಕಂದು ಬಣ್ಣದ ಬೆಕ್ಕಿನಮರಿ ಅವಳ ಕೈ ಸೇರಿತ್ತು. ಅದು ಪುಟ್ಟ ಹುಲಿಮರಿಯಂತೆ ಕಾಣಿಸುತ್ತಿತ್ತು. ಅದಕ್ಕೆ ಇಂಚರ ಅದನ್ನು ಟೈಗರ್ ಎಂದು ಕರೆಯುತ್ತಿದ್ದಳು.

ಟೈಗರ್ ಇಂಚರಳನ್ನು ಬಹಳವಾಗಿ ಹಚ್ಚಿಕೊಂಡುಬಿಟ್ಟಿತ್ತು. ಓದುವಾಗ ಕಾಲ ಕೆಳಗೆ ಕುಳಿತುಕೊಳ್ಳುತ್ತಿತ್ತು, ಸುಮ್ಮನೆ ಕುಳಿತುಕೊಂಡಿದ್ದಾಗ ಅವಳ ತೊಡೆಯ ಮೇಲೆ ಮಲಗುತ್ತಿತ್ತು, ಶಾಲೆಯಿಂದ ಬಂದ ಮೇಲೆ ಹತ್ತು ಹದಿನೈದು ನಿಮಿಷಗಳು ಅದರೊಡನೆ ಆಟವಾಡಿ ಮುದ್ದು ಮಾಡುವವರೆಗೂ ಬಿಡುತ್ತಿರಲಿಲ್ಲ. ಈಗೀಗ 'ಟೈಗರ್' ಎಂದು ಕರೆದ ತಕ್ಷಣ ಎಲ್ಲಿದ್ದರೂ ಓಡಿ ಬಂದುಬಿಡುತ್ತಿತ್ತು. ಹೀಗೆ ಅನ್ಯೋನ್ಯವಾಗಿ ಹೊಂದಿಕೊಂಡಿದ್ದ ತನ್ನ ಹುಟ್ಟುಹಬ್ಬದ ಕೊಡುಗೆ ಇದ್ದಕ್ಕಿದ್ದಂತೆ ಕಳೆದುಹೋಗಿತ್ತು.

'ಸ್ಕೂಲ್ ಆದ್ಮೇಲೆ ನಾನು ಬರ್ತೀನಿ ಹುಡುಕೋಣ' ಪಿಂಕಿ ಹೇಳಿದಾಗ ಇಂಚರ ಒಪ್ಪಿ ತಲೆಯಾಡಿಸಿದಳು. ಮನೆಯ ಸುತ್ತ ಮುತ್ತ, ಮೋರಿಯ ಒಳಗೆ, ಕಾರುಗಳ ಕೆಳಗೆ ಹುಡುಕಿದರು. ಪಿಂಕಿ ಅಕ್ಕಪಕ್ಕದ ಮನೆಯವರನ್ನು ಟೈಗರ್ ಬಗ್ಗೆ ಕೇಳಿದಳು. ಎದುರು ಮನೆಯಲ್ಲಿ ಕುಳಿತಿದ್ದ ಹಿರಿಯರು 'ಟೈಗರ್ ಅಂದರೆ ನಾಯಿಮರಿನಾ?' ಎಂದು ಕೇಳಿದರು. 'ಇಲ್ಲ ತಾತಾ ಬೆಕ್ಕಿನ ಮರಿ' ಎಂದಳು. 'ಓ ಬೆಕ್ಕಿನ ಮರಿನಾ, ಮೊನ್ನೆ ಸಂಜೆ ಮನೆ ಆಚೆ ಕುಳಿತಿದ್ದ ಒಂದು ಬೆಕ್ಕಿನಮರಿನಾ ಒಬ್ಬರು ಎತ್ತುಕೊಂಡು ಹೋದರು' ಎಂದರು.

'ಯಾರು ಅಂತ ನಿಮಗೆ ಗೊತ್ತಾ ತಾತ?' ಪಿಂಕಿ ಅವರನ್ನು ಕೇಳಿದಳು.

ಹಿರಿಯರು 'ಇಲ್ಲಮ್ಮ. ಆದರೆ ಆಗಾಗ ಅವರು ಇಲ್ಲೇ ಓಡಾಡ್ತಾ ಇರ್ತಾರೆ. ಪಕ್ಕದ ರಸ್ತೆಯವರು ಇರಬೇಕು' ಎಂದರು. ಅವರಿಗೆ ವಂದಿಸಿ, ಪಿಂಕಿ ತನ್ನ ಸೈಕಲ್ ಮೇಲೆ ಪಕ್ಕದ ರಸ್ತೆಯಲ್ಲಿ ಹಲವು ಬಾರಿ ಸುತ್ತು ಹೊಡೆದಳು. ಆದರೆ ಬೆಕ್ಕಿನಮರಿ ಪತ್ತೆಯಾಗಲಿಲ್ಲ.

ಶನಿವಾರ ಬೆಳಗ್ಗೆ ಅಷ್ಟು ಹೊತ್ತಿಗೆ ಪಿಂಕಿ ಇಂಚರಳ